**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.**

ಸಿ.ಸಿ. ನಂ.17/2022

ಪಿ.ಡಬ್ಲ್ಯೂಃ 4

ಸಿ.ಡಬ್ಲ್ಯೂಃ 5

ಸಾಕ್ಷಿದಾರರ ಹೆಸರು : ಸುರೇಶ ರಾಮಾ ನಾಯ್ಕ

ತಂದೆಯ ಹೆಸರು : ರಾಮಾ ನಾಯ್ಕ

ವಯಸ್ಸು : 51 ವರ್ಷ

ಉದ್ಯೋಗ : ವಲಯ ಅರಣ್ಯಾಧಿಕಾರಿ ಹೊಸಕಂಬಿ

ವಾಸ : ಹೊಸಕಂಬಿ

ದಿನಾಂಕಃ 01-12-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ** ಎ.ಪಿ.ಪಿ. ರವರಿಂದ

1. ನಾನು ದಿನಾಂಕ 01-08-2020 ರಿಂದ 21-02-2021 ರ ತನಕ ಅಂಕೋಲಾ ವಲಯದ ಕೊಟೆಭಾವಿ ಶಾಖೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 14-08-2020 ರಂದು ಬಾಳೆಗುಳಿ ಶಾಖಾ ಉಪ ಅರಣ್ಯಾಧಿಕಾರಿಯಾದ ಚಾಸಾ-1 ರವರು ನನಗೆ ದೂರವಾಣಿ ಮೂಲಕ ಕರೆಮಾಡಿ ನವಗದ್ದೆ ಗ್ರಾಮದ ಕಂಚಿನಬಾಗಿಲು ಹತ್ತಿರ ರಾಷ್ಟ್ರೀಯ ಹೆದ್ದಾರಿ 63 ರ ಹತ್ತಿರ 1 ನೇ ಆರೋಪಿಯ ಮನೆಗೆ ಹೋಗುವ ದಾರಿಯಲ್ಲಿ 1 ಕಡವೆಯನ್ನು ಬೇಟೆಯಾಡಿ ಅದರ ಮಾಂಸವನ್ನು ಬೇರ್ಪಡಿಸಿ, ಅನಧಿಕೃತವಾಗಿ ಸಾಗಾಟ ಮಾಡುತ್ತಿರುವ ಬಗ್ಗೆ ಖಚಿತ ವರ್ತಮಾನ ಇರುವುದನ್ನು ತಿಳಿಸಿದರು. ಅದರಂತೆ ನಾನು ಅಂಕೋಲಾ ವಲಯ ಅರಣ್ಯಾಧಿಕಾರಿ ಕಚೇರಿಗೆ ಬಂದು ಅಲ್ಲಿ ನನ್ನ ಜೊತೆ ಚಾಸಾ-1, ಚಾಸಾ-6, ಚಾಸಾ-7 ಮತ್ತು ಪಂಚರಾದ ಚಾಸಾ-2 ಮತ್ತು 3 ರವರು ಎಲ್ಲ ಸೇರಿ, ಇಲಾಖಾ ವಾಹನದಲ್ಲಿ ರಾಷ್ಟ್ರೀಯ

ಪಿ.ಡಬ್ಯೂಃ 4

ಸಿ.ಡಬ್ಯೂಃ 5

ಹೆದ್ದಾರಿ 63ರಲ್ಲಿ ಮುಂದೆ ಸಾಗಿ 1ನೇ ಆರೋಪಿಯ ಮನೆಗೆ ಹೋಗುವ ಕಾಲು ದಾರಿಯಲ್ಲಿ ಸುಮಾರು 50 ಮೀಟರ್ ಹಿಂದುಗಡೆ ಕಾಯುತ್ತ ಕುಳಿತಿದ್ದೆವು. ಸುಮಾರು ಮಧ್ಯಾಹ್ನ 1 ಘಂಟೆಗೆ ಆ ಕಾಲು ದಾರಿಯ ಹತ್ತಿರ ಒಂದು ಬೈಕ್ ನಿಲ್ಲಿಸಿರುವುದನ್ನು ಗಮನಿಸಿದೆವು. 5 ನಿಮಿಷದ ನಂತರ ಆ ಬೈಕಿನ ಹತ್ತಿರ ಇಬ್ಬರು ಆಸಾಮಿಗಳು ಬರುವುದನ್ನು ಗಮನಿಸಿದೆವು. ಆಗ ನಮ್ಮ ಇಲಾಖಾ ವಾಹನವನ್ನು ಆ ಬೈಕಿನ ಹತ್ತಿರ ತೆಗೆದುಕೊಂಡು ಹೋಗಲು ಪ್ರಾರಂಭಿಸಿದಾಗ, ಆ ಇಬ್ಬರ ಆಸಾಮಿಗಳ ಪೈಕಿ ಒಬ್ಬ ಆತನ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಅಲ್ಲಿಯೇ ಎಸೆದು, ಅರಣ್ಯ ಪ್ರದೇಶದಲ್ಲಿ ಆ ಇಬ್ಬರು ಓಡಲು ಪ್ರಾರಂಬಿಸಿದರು.

2. ನಾವು ಅವರಿಬ್ಬರನ್ನು ಬೆನ್ನಟ್ಟಿ, ಹಿಡಿದು ಆ ಚೀಲವನ್ನು ಎಸೆದ ಸ್ಥಳಕ್ಕೆ ತಂದು ನಿಲ್ಲಿಸಿ, ಅವರಿಬ್ಬರ ಹೆಸರು ಕೇಳಲಾಗಿ, ಒಬ್ಬ ಬ್ರಿಜೇಶ ಗೋಪಾಲ ನಾಯಕ ಹಾಗೂ ಇನ್ನೊಬ್ಬ ಹನುಮ ಜಟ್ಟು ಗೌಡ ಎಂದು ತಿಳಿಸಿದರು. ನಂತರ 2ನೇ ಆರೋಪಿಯನ್ನು ವಿಚಾರಿಸಲಾಗಿ, ಅವರು 1ನೇ ಆರೋಪಿಯಿಂದ ರೂ.1,500/-ಕ್ಕೆ ಕಡವೆ ಮಾಂಸವನ್ನು ತಂದಿರುವುದಾಗಿ ತಿಳಿಸಿರುತ್ತಾರೆ. ಪುನಹ 2ನೇ ಆರೋಪಿಯನ್ನು ಕಡವೆಯನ್ನು ಎಲ್ಲಿ ಬೇಟೆಯಾಡಿ ಮಾಂಸ ಮಾಡಿರುವುದು ಎಂದು ವಿಚಾರಿಸಲಾಗಿ, 3 ನೇ ಆರೋಪಿ ನನ್ನನ್ನು ಕರೆದುಕೊಂಡು ಬಂದಿದ್ದು, 1 ನೇ ಆರೋಪಿಯಿಂದ ಆ ಮಾಂಸವನ್ನು ರೂ.1,500/- ಕ್ಕೆ ಮಾತ್ರ ಖರೀದಿಸಿರುವುದು ಮತ್ತು 3 ನೇ ಆರೋಪಿಗೆ ಆ ಎಲ್ಲ ವಿಚಾರ ಗೊತ್ತಿದೆ ಎಂದು ತಿಳಿಸಿರುತ್ತಾರೆ. ಆಗ 3 ನೇ ಆರೋಪಿಯನ್ನು ವಿಚಾರಿಸಲಾಗಿ, ದಿನಾಂಕ 13-08-2020 ರಂದು ರಾತ್ರಿ 9 ಘಂಟೆ ಸಮಯಕ್ಕೆ 1 ನೇ ಆರೋಪಿ, 5 ನೇ ಆರೋಪಿ

ಪಿ.ಡಬ್ಯೂಃ 4

ಸಿ.ಡಬ್ಯೂಃ 5

ಹಾಗೂ ಅವರು ಸೇರಿ ಟಾರ್ಚ್, ಬಂದೂಕು, ಕತ್ತಿ, ಬ್ಲೆಡ್ ಗಳನ್ನು ಸೇರಿಸಿಕೊಂಡು ಬೇಟೆಯಾಡಲು ಹೋಗುವುದು ಎಂದು ನಿರ್ಧರಿಸಿ, 4 ನೇ ಆರೋಪಿ ನೀಡಿದ ಬಂದೂಕನ್ನು ತೆಗೆದುಕೊಂಡು, ಕಾಯುತ್ತಾ ಕುಳಿತಿರುವಾಗ ಒಂದು ಕಡವೆ ಅವರ ಮುಂದೆ ಹಾದು ಹೋದಾಗ, 1 ನೇ ಆರೋಪಿ ತನ್ನ ಬಳಿ ಇದ್ದ ಬಂದೂಕಿನ ಸಹಾಯದಿಂದ ಅದಕ್ಕೆ ಗುರಿ ಇಟ್ಟು ಹೊಡೆದಿರುತ್ತಾರೆ, ಮತ್ತು ಕಡವೆ ಸ್ಥಳದಲ್ಲಿ ಬಿದ್ದಿರದೆ ಇದ್ದುದರಿಂದ ಅದನ್ನು ಹುಡುಕಾಡಲು, ಸ್ವಲ್ಪ ದೂರದಲ್ಲಿ ಹಳ್ಳದ ಹತ್ತಿರ ಕಡವೆ ಬಿದ್ದಿರುವುನ್ನು ನೋಡಿರುತ್ತಾರೆ ಹಾಗೂ ಹತ್ತಿರ ಬಂದು ನೋಡಿದಾಗ ಕಡವೆ ಮೃತಪಟ್ಟಿರುವುದು ಗೊತ್ತಾಗಿತ್ತು ಎಂದು 3 ನೇ ನುಡಿದಿರುತ್ತಾರೆ. 3 ನೇ ಆರೋಪಿ ಹೇಳಿರುವಂತೆ, ಬಹಳ ರಾತ್ರಿಯಾಗಿದ್ದುದರಿಂದ ಅವರು 3 ಜನ 1 ನೇ ಆರೋಪಿಯ ಮನೆಯಲ್ಲಿ ಮಲಗಿರುತ್ತಾರೆ, ಮತ್ತು ಮುಂಜಾನೆ ಬಂದು, ಅವರ ಬಳಿ ಇದ್ದ ಕತ್ತಿ ಮತ್ತು ಬ್ಲೆಡಿನ ಸಹಾಯದಿಂದ ಆ ಕಡವೆಯ ತಲೆ, 4 ಕಾಲುಗಳನ್ನು, ಹಾಗೂ ಹೊಟ್ಟೆಯ ಭಾಗವನ್ನು ಕತ್ತರಿಸಿ, ಹೊಟ್ಟೆಯಲ್ಲಿದ್ದ ಸಂಪೂರ್ಣ ಬಲಿತ ಭ್ರೂಣವನ್ನು ಕತ್ತರಿಸಿ ಅವುಗಳನ್ನು ಹಳ್ಳದಲ್ಲಿ ಮುಚ್ಚಿ ಅದರ ಮೇಲೆ ಕಲ್ಲನ್ನು ಇಟ್ಟಿರುತ್ತಾರೆ. ಅವರು ಮುಂದುವರಿದು, ಅದರ ಮಾಂಸಗಳನ್ನು ನದಿಯಲ್ಲಿ ತೊಳೆದು 4 ಭಾಗಗಳಾಗಿ ವಿಂಗಡಿಸಿ, ಬಂದೂಕು ನೀಡುವಾಗ 1 ಪಾಲನ್ನು ಅವರಿಗೆ ನೀಡಬೇಕು ಎಂದು ತಿಳಿಸಿದ್ದರಿಂದ 1 ಭಾಗವನ್ನು 4 ನೇ ಆರೋಪಿಗೆ ನೀಡಿರುತ್ತಾರೆ ಎಂದು ತಿಳಿಸಿದರು.

ಪಿ.ಡಬ್ಲ್ಯೂಃ 4

ಸಿ.ಡಬ್ಲ್ಯೂಃ 5

3. ಸ್ಥಳದಲ್ಲಿ ಇದ್ದ ಮಾಂಸ ಮತ್ತು ಬೈಕ್ ಸಂಖ್ಯೆ ಕೆಎ–30–ಆರ್–3537 ಅನ್ನು ಜಪ್ತು ಮಾಡಿ ಪಂಚನಾಮೆಯನ್ನು ಮಾಡಿರುತ್ತೇವೆ. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ–1 ಡಿ ಎಂದು ಗುರುತಿಸಲಾಯಿತು. 4 ಫೋಟೊಗಳು ಮತ್ತು 1 ಸಿ.ಡಿ.ಯನ್ನು ಆ ಬೈಕ್ ಬಾಬ್ತು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಸಾಬೀತುಪಡಿಸುವ ಜವಾಬ್ದಾರಿಯೊಂದಿಗೆ ನಿಪಿ–2 ರಿಂದ 6 ಎಂದು ಗುರುತಿಸಲಾಗಿದೆ. 2 ಮತ್ತು 3 ನೇ ಆರೋಪಿಗಳನ್ನು ವಶಕ್ಕೆ ಪಡೆದು ಅವರುಗಳ ಜೊತೆ ಜಪ್ತು ಮಾಡಿದ 7 ಕೆ.ಜಿ. ಕಡವೆ ಮಾಂಸ ಮತ್ತು ಆ ಬೈಕ್ ನೊಂದಿಗೆ ವಲಯ ಕಚೇರಿಗೆ ಬಂದಿರುತ್ತೇವೆ. 2 ಮತ್ತು 3 ನೇ ಆರೋಪಿಗಳನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ.

4. ಅದೇ ದಿನ ವಲಯ ಕಚೇರಿಯಿಂದ ಪುನಃ 1 ನೇ ಆರೋಪಿಯ ಮನೆಗೆ ಹೋಗುವ ಕಾಲು ದಾರಿಯ ಬಳಿಗೆ ಬಂದು ಕಾಲುದಾರಿಯಲ್ಲಿ ಅವರ ಮನೆಗೆ ಹೋಗುತ್ತೇವೆ. ಆಗ 1 ನೇ ಆರೋಪಿ ಅವರ ಮನೆಯಲ್ಲಿ ಇರಲಿಲ್ಲ. ಸುತ್ತಮುತ್ತ ಹುಡುಕಾಡಿದಾಗ, ಹತ್ತಿರದಲ್ಲಿದ್ದ ಒಂದು ಕಾಲುವೆಯ ಮಧ್ಯದಲ್ಲಿ ಇದ್ದ ಬಂಡೆಯಲ್ಲಿ 1 ನೇ ಆರೋಪಿ ಮಲಗಿರುವುದು ಕಂಡುಬಂತು. ಚಾಸಾ–2 ಮತ್ತು 3 ರವರು 1 ನೇ ಆರೋಪಿಯನ್ನು ಗುರುತಿಸಿ ಆತನ ಹೆಸರು ಹೇಳುತ್ತಾರೆ. ನಾವು ಹೋಗಿ 1 ನೇ ಆರೋಪಿಯನ್ನು ವಶಕ್ಕೆ ಪಡೆದೆವು. 1 ನೇ ಆರೋಪಿಯನ್ನು ವಿಚಾರಿಸಲಾಗಿ, ಬೇಟೆಯಾಡಿರುವ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿರುತ್ತಾರೆ. ಆ ಸ್ಥಳದಿಂದ ಆತನ ಜೊತೆ 100 ಮೀಟರ್ ಮುಂದೆ ಸಾಗಿದಾಗ, ಕಡವೆ ಸತ್ತು ಬಿದಿದ್ದ ಸ್ಥಳದಲ್ಲಿ , ಬೇರ್ಪಡಿಸಿದ ತಲೆ, 4 ಕಾಲುಗಳನ್ನು

ತೋರಿಸುತ್ತಾರೆ. ಭ್ರೂಣವನ್ನು ನೀರಿನಲ್ಲಿ ಇಟ್ಟಿರುವುದನ್ನು ತೋರಿಸಿರುತ್ತಾರೆ. ಆದರೆ ಕರಳನ್ನು ನೀರಿನಲ್ಲಿ ಬಿಟ್ಟಿರುವುದರಿಂದ ಸಿಕ್ಕಿರುವುದಿಲ್ಲ. ಆತನನ್ನು ಯಾವ ಬಂದೂಕಿನಿಂದ ಹೊಡೆದಿರುವುದು ಎಂದು ಕೇಳಿದಾಗ, ಹತ್ತಿರದಲ್ಲಿ ಇರುವ ಬಿ.ಡಿ.ಗೌಡರ ಭಾಗಾಯ್ತು ಜಮೀನಿನಲ್ಲಿ ಒಂದು ತೆಂಗಿನಮರದ ಬುಡದ ಕೆಳಗೆ ಆ ಬಂದೂಕನ್ನು ಬಚ್ಚಿಟ್ಟಿರುವುದಾಗಿ ತಿಳಿಸಿದರು. ಅದರಂತೆ ಅಲ್ಲಿ ಪರಿಶೀಲಿಸಿದಾಗ, ಬಂದೂಕು ಇರುವುದು ಕಂಡು ಬಂತು. ಆ ಬಂದೂಕನ್ನು ಆರೋಪಿ 4 ರವರು ನೀಡಿರುವುದಾಗಿ ತಿಳಿಸಿದರು. 3 ನೇ ಆರೋಪಿ ಹೇಳಿದ ರೀತಿಯ ಸಂಗತಿಗಳನ್ನು 1 ನೇ ಆರೋಪಿ ಕೂಡ ನುಡಿದಿರುತ್ತಾರೆ.

5. ಆ ತಲೆ, 4 ಕಾಲು, ಭ್ರೂಣ, ಬಂದೂಕು, ಕತ್ತಿಯನ್ನು ಜಪ್ತು ಮಾಡಿ, ಸ್ಥಳದಲ್ಲಿ ಪುರವಣಿ ಪಂಚನಾಮೆಯನ್ನು ಸಂಜೆ 4.30 ರಿಂದ 6.00 ಘಂಟೆಯ ತನಕ ಜರುಗಿಸಿ, ಫೋಟೊವನ್ನು ತೆಗೆದಿರುತ್ತೇವೆ. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7 ಡಿ ಎಂದು ಗುರುತಿಸಲಾಯಿತು. ಅಂಕೋಲಾ ಪಶುವೈಧ್ಯಾಧಿಕಾರಿಯನ್ನು ಕರೆಸಿ ತಲೆ ಭಾಗದ ಮತ್ತು ಮಾಂಸ ಮತ್ತು ಗುಂಡಿನ ಏಟು ಬಿದ್ದ ಚರ್ಮದ ಭಾಗವನ್ನು ಮಾದರಿ ತೆಗೆಸಲಾಗಿತ್ತು. 6 ಫೋಟೊಗಳು ಮತ್ತು 1 ಸಿ.ಡಿ.ಯನ್ನು ಆ ಬಾಬ್ತು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಸಾಬೀತುಪಡಿಸುವ ಜವಾಬ್ದಾರಿಯೊಂದಿಗೆ ನಿಪಿ-8 ರಿಂದ 14 ಎಂದು ಗುರುತಿಸಲಾಗಿದೆ. ಬಂದೂಕು, ಕತ್ತಿ, ಗುಂಡೇಟು ಬಿದ್ದ ಚರ್ಮ ಹಾಗೂ ಮಾದರಿ

ಪಿ.ಡಬ್ಲ್ಯೂಃ 4

ಸಿ.ಡಬ್ಲ್ಯೂಃ 5

ಮಾಂಸದ ತುಂಡುಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮುಮಾ-3 ರಿಂದ 6 ಎಂದು ಗುರುತಿಸಲಾಗಿದೆ. 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. 1 ನೇ ಆರೋಪಿಯನ್ನು ವಲಯ ಕಚೇರಿಗೆ ಕರೆದುಕೊಂಡು ಬಂದು ಮುಂದಿನ ಕ್ರಮ ಜರುಗಿಸಲಾಗಿದೆ.

**ಪಾಟೀ ಸವಾಲುಃ** ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.